# ಕನ್ನಡ ಸಾಹಿತ್ಯಕ್ಕು ಮತ್ತು ಪರಿಸರಕ್ಕಿರುವ ಸಂಬಂಧ

**ಶಶಿಕಲಮ್ಮ ಯು**
ಸೈಂಟ್ ಕ್ಲಾರೆಟ್ ಕಾಲೇಜು, ಸಂಶೋಧನಾರ್ಥಿ ಜೈನ್ ವಿಶ್ವವಿದ್ಯಾಲಯ, ಬೆಂಗಳೂರು

**ಡಾ.ಡಿ. ಎಸ್. ಶಿಕುಮಾರ**
ಮಾರ್ಗದರ್ಶಕರು ಜೈನ್ ಡೀಮ್ಡ ಟು ಬಿ ವಿ.ವಿ, ಬೆಂಗಳೂರು

**OPEN ACCESS**

Volume: 12

Special Issue: 1

Month: October

Year: 2024

E-ISSN: 2582-0397

P-ISSN: 2321-788X

Impact Factor: 3.025

Citation:
**ಶಶಿಕಲಮ್ಮ ಯು**, and **ಡಾ.ಡಿ. ಎಸ್. ಶಿಕುಮಾರ. "ಕನ್ನಡ ಸಾಹಿತ್ಯಕ್ಕು ಮತ್ತು ಪರಿಸರಕ್ಕಿರುವ ಸಂಬಂಧ"** *Shanlax International Journal of Arts, Science and Humanities,* vol. 12, no. S1, 2024, pp. 168–72.

DOI:
https://doi.org/10.34293/sijash.v12iS1-i2-Oct.8435

ಕನ್ನಡ ಸಾಹಿತ್ಯದಲ್ಲಿ ಅಪಾರವಾದ ಪರಿಸರಕ್ಕೆ ಪೂರಕವಾದ ಸಂಪತ್ತು ಇದೆ. ನಮ್ಮ ಕನ್ನಡದ ಕವಿಗಳು ತಮ್ಮ ಕಥೆ ಕವನ, ಕಾದಂಬರಿಗಳಲ್ಲಿ ಅಪಾರವಾದ ಪ್ರಮಾಣದಲ್ಲಿ ಪರಿಸರದ ಜೀವಿಗಳನ್ನು ಮತ್ತು ಸಸ್ಯಗಳನ್ನು ಬಳಸಿಕೊಂಡಿರುವುದನ್ನು ಕಾಣುತ್ತೇವೆ. ಆದಿ ಕವಿ ಪಂಪನಿಂದ ಹಿಡಿದು ಪೂರ್ಣಚಂದ್ರ ತೇಜಸ್ವಿಯವರೆಗೆ ಕನ್ನಡ ಸಾಹಿತ್ಯದಲ್ಲಿ ಪರಿಸರದ ಬಳಕೆಯನ್ನು ಕಾಣುತ್ತೇವೆ. ಕವಿಗಳಿಗೆ ತಮ್ಮ ಕಾವ್ಯರಚನೆಗೆ ಪರಿಸರವೇ ಬಂಡವಾಳ ಎಂಬುದನ್ನು ಕಾಣುತ್ತೇವೆ.

ಇತ್ತಿಚಿನ ದಿನಗಳಲ್ಲಿ ಹಲವಾರು ಕವಿಗಳು ತಮ್ಮ ಕಾವ್ಯದ ಮೂಲಕ, ಕಾದಂಬರಿಯ ಮೂಲಕ ಪರಿಸರದ ಮಹತ್ವವನ್ನು ಮತ್ತು ಅದರ ನಾಶದಿಂದ ಆಗುವ ತೊಂದರೆಗಳನ್ನು ಕಾಣುತ್ತೇವೆ. ಇತ್ತಿಚಿಗೆ ಆಗುವ ಹಾನಿಗೆ ಕಾರಣವೇ ಅವೈಜ್ಞಾನಿಕವಾದ ರಸ್ತೆ ನಿರ್ಮಾಣ, ರೈಲು ಮಾರ್ಗಗಳ ನಿರ್ಮಾಣ, ನೀರಾವರಿ ಯೋಜನೆಗಳು, ಗಣಿಗಾರಿಕೆ ಹೀಗೆ ಹಲವಾರು ಬಗೆಯಲ್ಲಿ ಪರಿಸರದ ಮೇಲೆ ಆಗುತ್ತಿರುವ ಹಾನಿಯೇ ಇಲ್ಲಿ ಕಾರಣ ಎಂಬುದು ತಿಳಿದು ಬರುತ್ತದೆ. ಇದಕ್ಕೆ ಮೂಲಕಾರಣ ಪರಿಸರ ನಾಶದಿಂದಾಗುವ ಹಾನಿಯ ಬಗ್ಗೆ ಅರಿವಿಲ್ಲದೇ ಇರುವುದು.

ನಮ್ಮ ಆದಿಕವಿ ಪಂಪನ ಕಾಲದಿಂದ ಪರಿಸರಕ್ಕೆ ಮನ್ನಣೆಯನ್ನು ನೀಡಿರುವುದನ್ನು ಕಾಣುತ್ತೇವೆ.

'ಮರಿ ಕೋಗಿಲೆಯಾಗಿಯೋಳ್
ಮರಿದುಂಬಿಯಾಗಿಯೋಳ್
ಪುಟ್ಟುವುದೆನ್ನ ಮನಂ ಬನವಾಸಿ ದೇಶದೋಳ್'

ಎಂಬಮಾತಿನಿಂದ ತಿಳಿಯುತ್ತದೆ ಪಂಪನ ಕಾಲದಲ್ಲಿನ ಬನವಾಸಿ ದೇಶದಮೇಲಿನ ಪ್ರೀತಿ, ಪರಿಸರದ ಮೇಲೆ ಕವಿಯ ಒಲವು. ಹೀಗೆ ಕನ್ನಡ ಸಾಹಿತ್ಯದಲ್ಲಿ ಪರಿಸರ ಪ್ರೇಮವನ್ನು ಕಾಣುತ್ತೇವೆ. ಇದರ ಅರಿವಿದ್ದರೆ ಮಾತ್ರ ನಾವು ಪರಿಸರವನ್ನು ಉಳಿಸಿಕೊಳ್ಳಲು ಸಾಧ್ಯ.

ಇತ್ತಿಚಿಗೆ ಪರಿಸರದಲ್ಲಿ ಹಲವಾರು ಅನಾಹುತಗಳು ನಡೆಯುತ್ತಿವೆ. ಇದನ್ನು ತಡೆಗಟ್ಟಲು ಮೊದಲು ಅರಿವನ್ನು ಮೂಡಿಸುವುದು ಅತೀ ಮುಖ್ಯ ನಮ್ಮ ಕನ್ನಡ ಸಾಹಿತ್ಯದ ಮೂಲಕ ಈ ಅರಿವನ್ನು ಮೂಡಿಸುವ ಒಂದು ಪ್ರಯತ್ನವನ್ನು ಇಲ್ಲಿ ಮಾಡುತ್ತಿರುವೆ.

**ಉದ್ದೆಶಗಳು**

-  ಪರಿಸರದ ಮೇಲೆ ನಡೆಯುತ್ತಿರುವ ಹಾನಿಯ ಬಗ್ಗೆ ಅರಿವನ್ನು ಮೂಡಿಸುವುದು.
-  ಪರಿಸರ ಹಾನಿಗೆ ಕಾರಣಗಳನ್ನು ಅರಿಯುವುದು.
-  ಪರಿಸರಹಾನಿಯ ಪರಿಣಾಮವನ್ನು ತಿಳಿಯುವುದು.
-  ಜೀವಜಾಲದ ಮೇಲೆ ಆಗುವ ಪರಿಣಾಮವನ್ನು ಅರಿಯುವುದು
-  ಭೂಮಿಯಲ್ಲಿ ಜೀವಜಾಲಗಳ ಉಪಯೋಗವನ್ನು ತಿಳಿಯುವುದು
-  ಕನ್ನಡ ಸಾಹಿತ್ಯಕ್ಕೂ ಪರಿಸರಕ್ಕೂ ಇರುವ ನಂಟನ್ನು ಅರಿಯುವುದು
-  ಕನ್ನಡ ಸಾಹಿತ್ಯದ ಮೂಲಕ ಪರಿಸರದ ಬಗ್ಗೆ ಅರಿವನ್ನು ಮೂಡಿಸುವುದು.

ಕನ್ನಡ ಸಾಹಿತ್ಯದಲ್ಲಿ ಪರಿಸರ ಮಾಲಿನ್ಯದಬಗ್ಗೆ ಅರಿವನ್ನು ಮೂಡಿಸುವಲ್ಲಿ ಹಲವಾರು ಕವಿಗಳು ತಮ್ಮ ಕೃತಿಗಳನ್ನು ರಚಿಸಿದ್ದಾರೆ. ಅಲ್ಲದೆ ತಮ್ಮಕೃತಿಗಳ ಮೂಲಕ ಪರಿಸರದ ಗಿಡ, ಮರ, ಹಕ್ಕಿ ಪಕ್ಷಿಗಳ ಬಗ್ಗೆ ಅರಿವನ್ನು ಮೂಡಿಸಿದ್ದಾರೆ. ಅಲ್ಲದೆ ತಮ್ಮ ಕೃತಿಗಳಲ್ಲಿ ಪರಿಸರದ ವಸ್ತುಗಳನ್ನು ಬಳಸಿಕೊಂಡು ಕತೆ, ಕವನ, ಕಾದಂಬರಿಗಳನ್ನು ರಚಿಸಿರುವುದನ್ನು ಕಾಣುತ್ತೇವೆ. ಕೆಲವು ಲೇಖನಗಳು ಪರಿಸರ ಹಾನಿಯ ನೋಟವನ್ನು ತಿಳಿಸುತ್ತವೆ.

1. ಪರಿಸರದ ಮೇಲೆ ಮಾನವನ ಅತೀಯಾದ ಒತ್ತಡದ ಪರಿಣಾಮ
2. ಅಭಿವೃದ್ಧಯ ಹೆಸರಿನಲ್ಲಿ ಪರಿಸರದ ಮೇಲಾಗುವ ಪರಿಣಾಮ
3. ಪರಿಸರ ಮಾಲಿನ್ಯದಿಂದ ಪರಿಸರದ ಜೀವಿಗಳ ಮೇಲಾಗುವ ಪರಿಣಾಮ
4. ಕೃಷಿ ಭೂಮಿಒತ್ತುವರಿಯಿಂದ ಪರಿಸರಕ್ಕಾಗುವ ಹಾನಿ
5. ಪರಿಸರದ ಸಸ್ಯಗಳ ಬಗ್ಗೆ ಕನ್ನಡ ಸಾಹಿತ್ಯದ ಮೂಲಕ ಅರಿವು

**ಪರಿಸರದ ಮೇಲೆ ಮಾನವನ ಅತೀಯಾದ ಒತ್ತಡದ ಪರಿಣಾಮ**

ಹಿಂದಿನ ಕಾಲದಲ್ಲಿ ಜನ ಎತ್ತಿನ ಬಂಡಿಗಳಲ್ಲಿ ಸಂಚಾರ ಮಾಡುತ್ತಿದ್ದರು ಈಗ ಕಾಲ ಬದಲಾಗಿದೆ. ಇಂದು ಇಂದನಗಳನ್ನು ಬಳಸಿ ಕಾರು ಬಸ್ಸು ಮುಂತಾದ ವಾಹನಗಳನ್ನು ಬಳಸುತ್ತಾ ಬಂದಿದ್ದಾರೆ. ಅದಕ್ಕೆ ಇಂಧನವನ್ನು ತೆಗೆಯುವುದು ಒಂದು ಸವಾಲಾಗಿದೆ. ಭೂಮಿಯ ಅಂತರಾಳದಿಂದ ಪೆಟ್ರೋಲ್ ತೆಗೆಯುವುದು ಒಂದು ಅನಿವಾರ್ಯವಾಗಿದೆ. ಅದರಿಂದ ಗಣಿಗಾರಿಕೆ ಬಹು ಮುಖ್ಯವಾಗಿದೆ. ಭೂಮಿಯನ್ನು ಬಗಿದು ಇಂಧನವನ್ನು ತಗೆಯುವುದರಿಂದ ಭೂಮಿಯ ಮೇಲಿನ ಗಿಡ, ಮರಗಳಿಗೆ, ಪ್ರಾಣಿ ಪಕ್ಷಿಗಳಿಗೆ ಹಾನಿಯಾಗುತ್ತದೆ.

"ಕ್ಷಯಿಸುವ ಇಂಥ ಸಂಪತ್ತಿನ ಇನ್ನೊಂದು ಕರಾಳ ಸಮಸ್ಯೆ ಏನೆಂದರೆ, ಇವೆಲ್ಲಾ ಸೇರಿ ಭೂಮಿಗೆ ಕ್ಷೆಯರೋಗ ಉಂಟುಮಾಡುತ್ತವೆ. ಇಂಥ ಪಳಯುಳಿಕೆ ಇಂದನವನ್ನು ಉರಿಸಿದಾಗಲೆಲ್ಲ ಕಾರ್ಬನ್ ಡೈಆಕ್ಸೈಡ್, ಮೀಥೇನ್ ಮತ್ತು ನೈಟ್ರೋಜನ್ ಆಕ್ಸೈಡ್ ಮುಂತಾದ ವಿಷನಿಲಗಳು ವಾತಾವರಣ ಸೇರುತ್ತವೆ. ಇದರಿಂದದಾಗಿ ಭೂಮಿಯ ತಾಪಮಾನ ಏರಿ ವಾತಾವರಣ ಏರುಪೇರಾಗುತ್ತದೆ. ಋತುಮಾನಗಳ ಅಸಮತೋಲ ಉಂಟಾಗುತ್ತದೆ" 1.ಈ ಬಗೆಯ ಅನಿಲಗಳು ವಾತಾವರಣವನ್ನು ಸೇರುವುದರಿಂದ ಕೇವಲ ಭೂಮಿಗೆ ಮಾತ್ರವಲ್ಲ, ಇಡೀ ಜೀವಜಾಲಕ್ಕೆ ಹಾನಿಯನ್ನು ಉಂಟುಮಾಡುತ್ತದೆ. ಈ ಬಗೆಯ ಅನಿಲಗಳು ಮಾನವನ ದೇಹವನ್ನು ಸೇರುವುದರಿಂದ ಹಲವಾರು ಕಾಯಿಲೆಗಳಿಗೆ ಕಾರಣವಾಗುತ್ತದೆ. ಅಲ್ಲದೆ ನಾವು ಅರಣ್ಯನಾಶಕ್ಕೆ ಮುಂದಾಗಿರುವುದೂ ಸಹ ಒಂದು ಕಾರಣವಾಗಿದೆ. ಕಲ್ಲಿದ್ದಲು ಗಣಿಗಾರಿಕೆಯಿಂದ ಸಹ ಭೂಮಿಗೆ ಹಾನಿಯಾಗುತ್ತಿದೆ. ಇದನ್ನು ತಪ್ಪಿಸಲು ಅಸಾಧ್ಯವಾಗಿದೆ. ಪರಿಸರ ಮಾಲಿನ್ಯದ ಪರಿಣಾಮವನ್ನು, ಅದರ ಅರಿವನ್ನು ಮೂಡಿಸಿದರೆ ಆಗುವ ಪ್ರಯೋಜನವನ್ನು ಕನ್ನಡ ಸಾಹಿತ್ಯದ ಮೂಲಕ ತಿಳಿಸಿದರೆ ಪರಿಸರವನ್ನು ಉಳಿಸಿಕೊಳ್ಳಲು ಸಹಾಯಕವಾಗುತ್ತದೆ.

**ಅಭಿವೃದ್ಧಯ ಹೆಸರಿನಲ್ಲಿ ಪರಿಸರದ ಮೇಲಾಗುವ ಪರಿಣಾಮ**

ಇಂದು ಅಭಿವೃದ್ಧಿಯ ಹೆಸರಿನಲ್ಲಿನಡೆಯುತ್ತಿರುವ ದಬ್ಬಾಳಿಕೆಗಳು ನಮ್ಮ ಪಶ್ಚಿಮಘಟ್ಟವನ್ನೇ ನಾಶಮಾಡುತ್ತಿದೆ. ಅಲ್ಲದೆ ಕೆಲವು ಅವಘಡಗಳಿಗೆ ಕಾರಣವಾಗುತ್ತಿದೆ. ಈ ವಿಚಾರವನ್ನು ನಮ್ಮ ಪೂರ್ಣಚಂದ್ರ ತೇಜಸ್ವಿಯವರ 'ನಿಗೂಢ ಮನುಷ್ಯರು' ಕಿರು ಕಾದಂಬರಿಯಲ್ಲಿ ಕಾಣುತ್ತೇವೆ.

ಹೊಸದಾಗಿ ನಿರ್ಮಿಸಿದ ರಸ್ತೆಯಲ್ಲಿ ಕಾರು ಸಾಗುತ್ತಿದ್ದಾಗ ಮಳೆಜೋರಾಗಿ ಬಂದಿರುವುದರಿಂದ ಅಪಾರವಾಗಿ ಜಾರಲು ಪ್ರಾರಂಭಿಸಿತು.

'ಒಂದು ಸಾರಿ ಜಗನ್ನಾಥನಿಗೆ ಕಾರು ನಿಧಾನವಾಗಿ ಪ್ರಪಾತದ ಕಡೆಗೆ ಜಾರಿ ಹೋಗುತ್ತಿದೆ ಎಂದೆನಸತೊಡಗಿತು. ಎಷ್ಟು ಮಾಡಿದರೂ ಜಗನ್ನಥನಿಗೆ ಅದನ್ನು ಭ್ರಮೆ ಎಂದು ತಿರಸ್ಕರಿಸಲಾಗಲೇ ಇಲ್ಲ. ಕೊನೆಗೆ ರಂಗಪ್ಪನಿಗೆ ಅದನ್ನು ನಿವೇದಿಸಿದ. ರಂಗಪ್ಪ ಕಾರಿನ ದೀಪ ಹಾಕೆಂದು ಹೇಳಿದ. ಜಗನ್ನಥ ಕಾರಿನ ದೀಪ ಹಾಕಿದ ಕೂಡಲೇ ಜಾರುತ್ತಿದ್ದ ಕಾರು ಸಟ್ಟನೆ ನಿಂತಂತೆನಿಸಿತು.'2.

ನಮ್ಮ ಪಶ್ಚಿಮ ಘಟ್ಟಗಳು ಆಗಾಗ ದಾಳಿಗೆ ಒಳಗಾಗುತ್ತಲೇ ಇರುತ್ತವೆ. ಇಲ್ಲಿ ಗಣಿಗಾರಿಕೆ, ವ್ಯವಸಾಯ ಎಂದು ಹಲವಾರು ಬಗೆಯ ಚಟುವಟಿಕೆಗಳು ನಡೆಯುತ್ತಿದ್ದುದರಿಂದ ಈ ಎಲ್ಲಾ ಚಟುವಟಿಕೆಗಳಿಗೆ ಘಟ್ಟವನ್ನು ಅಗೆದು ರಸ್ತೆ ನಿರ್ಮಿಸಿರುವುದೂ ಸಹ ಕಾರಣವಾಗಿದೆ. ಇತ್ತಿಚಿಗೆ ಗಡ್ಡ ಕುಸಿದು ಆದ ದುರಂತವನ್ನು ನಾವು ಕಂಡಿದ್ದೇವೆ. ಇದಕ್ಕೆಲ್ಲಾ ಕಾರಣ ಅವೈಜ್ಞಾನಿಕ ರಸ್ತೆಗಳ ನಿರ್ಮಾಣವೇ ಕಾರಣ ಎಂಬುದು ತಿಳಿದು ಬರುತ್ತಿದೆ.

ಗುಡ್ಡಗಳನ್ನು ಬಗೆದು ಗಣಿಗಾರಿಕೆ ಮಾಡಿರುವುದರಿಂದ ಹೊಳೆಗಳಲ್ಲಿ ಹೂಳು ತುಂಬುತ್ತಿದೆ. ನಿಗೂಢ ಮನುಷ್ಯರು ಕಾದಂಬರಿಯಲ್ಲಿ ಹೇಳಿರುವಂತೆ ಎಣ್ಣೆ ಹೊಳೆ ಕೆಂಪಾಗಿ ಹರಿಯುತ್ತಿತ್ತು. ಸೇತುವೆಯೇ ಮುಳುಗಿ ಹೋಗಿತ್ತು.

ಈ ಕಾದಂಬರಿಯಲ್ಲಿ ತೇಜಸ್ವಿಯವರು ಪರಿಸರದ ಮೇಲಿನ ದಬ್ಬಾಳಿಕೆಯ ಪರಿಣಾಮವನ್ನು ಸ್ಪಷ್ಟವಾಗಿ ಹೇಳಿದ್ದಾರೆ. ಪ್ರಕೃತಿಯ ಮೇಲಿನ ದಬ್ಬಾಳಿಕೆಯನ್ನು ನಿಲ್ಲಿಸದೇ ಹೋದರೆ ದಿನದಿಂದ ದಿನಕ್ಕೆ ಪ್ರಕೃತಿಯ ದಾಳಿಯನ್ನು ಎದುರಿಸಬೇಕಾಗುತ್ತದೆ ಎಂದು ಹೇಳಿದ್ದಾರೆ.

'ಬರೀ ಕೈಗಾರಿಕರಣದ ಬೆನ್ನು ಹತ್ತಿ ಹೋದಪೋಲ್ಯಾಂಡ್, ರುಮೇನಿಯಾ,ರಷ್ಯಾ, ಹಂಗೇರಿತರದ ಮಾಜಿ ಕಮ್ಯುನಿಷ್ಟ್ ದೇಶಗಳೂ ಅದೇ ಹಾದಿಯಲ್ಲಿ ನಡೆದ ಬೆಲ್ಜಿಯಂ, ಅಮೇರಿಕಾ ಮುಂತಾದ ಪ್ರಜಾಪ್ರಭುತ್ವವಾದಿ ದೇಶಗಳೂ ಪರಿಸರ ನಾಶಕ್ಕೆ ಉದಾಹರಣೆಯಾಗಿವೆ'

ಇತ್ತೀಚಿ ದಿನಗಳಲ್ಲಿ ಈ ದೇಶಗಳು ಕೈಗಾರಿಕೆಗಳಿಂದ ಆಗುವ ಹಾನಿಯನ್ನು ಅರಿತು ಪರಿಸರವನ್ನು ಅಭಿವೃದ್ಧಿಯ ಯೋಜನೆಗಳನ್ನು ಹಾಕಿಕೊಳ್ಳುತ್ತಿದೆ. ನೂರೈವತ್ತು ವರ್ಷಗಳಿಂದ ಫಿನಲೆಂಡ್ ದೇಶ ಇವತ್ತಿಗೂ ಸಹ ಶೇ. 70 ಭಾಗ ಅರಣ್ಯವನ್ನು ಅವಲಂಬಿಸಿದೆ. ಒಂದೇ ಒಂದು ಪ್ರಾಣಿ ಸಹ ಅಲ್ಲಿಂದ ನಾಶವಾಗಿಲ್ಲ. ಅರಣ್ಯದ ಸಲಕರಣೆಗಳನ್ನು ಅವಲಂಬಿಸಿ ವಿದ್ಯುಥ್ ಅನ್ನು ತಯಾರಿಸುತ್ತಿದೆ. ಅಂದರೆ ಇಂದಿನ ದಿನಗಳಲ್ಲಿ ಈ ಬಗೆಯ ಯೋಜನೆಗಳು ಬೇಕು, ಇದರಿಂದ ಪರಿಸರವೂ ಉಳಿಯುತ್ತದೆ. ಮತ್ತು ಕೈಗಾರಿಕೆಯೂ

ಮುಂದುವರಿಯುತ್ತಿದೆ. ನಮ್ಮ ದೇಶದಲ್ಲಿ ಕೈಗಾರಿಕೆಯ ಹೆಸರಿನಲ್ಲಿ ಅರಣ್ಯ ನಾಶ ವಾಗುತ್ತಿದೆ. ಅರಣ್ಯ ನಾಶವಾಗದೇ ಇರುವಂತಹ ಯೋಜನೆಗಳನ್ನು ರೂಪಿಸುವುದು ಅನಿವಾರ್ಯ. ಆದರೆ ಇಂದು ಈ ಬಗೆಯ ಯೋಜನೆಗಳು ಕಾಣುತ್ತಿಲ್ಲ. ಕಾರಣ ಅರಿವಿನ ಕೊರತೆ. ಪರಿಸರ ನಾಶದಿಂದಾಗುವ ಹಾನಿಯ ಬಗ್ಗೆ ಅರಿವು ಮೂಡಿದರೆ ಇದಕ್ಕೆ ಯೋಜನೆಯನ್ನು ಮಾಡುತ್ತಾರೆ, ಹಾಗಿ ಮೊದಲು ಜನರಿಗೆ ಮತ್ತು ದೇಶವನ್ನಾಳವ ನಾಯಕರಿಗೆ ಈ ಬಗೆಯ ಅರಿವನ್ನು ಮೂಡಿಸಬೇಕು. ಅಂದಲ್ಲಿ ಮಾತ್ರ ಪರಿಸರಕ್ಕೆ ಪೂರಕವಾದ ಯೋಜನೆಗಳು ಬರುತ್ತವೆ.

1950–90ರ ಮಧ್ಯೆ ಭಾರತದಲ್ಲಿ ಅಭಿವೃದ್ಧಿ ಹೆಸರಿನಲ್ಲಿ ನಿರಾಶ್ರಿತರಾದ ಮೂಲ ನಿವಾಸಿಗಳ ಸಂಖ್ಯೆ ಈ ಪಟ್ಟಿಯಲ್ಲಿ ಕಾಣುತ್ತದೆ.

| ಅಭಿವೃದ್ಧಿ ಯೋಜನೆಗಳು | ನೆಲೆ ತಪ್ಪಿದವರು | ಪುನರ್ವಸತಿ ಪಡೆದವರು | ಈಗಲೂ ನಿರ್ಗತಿಕರು |
|---|---|---|---|
| ಆನೆಕಟ್ಟುಗಳು | 53.00 ಲಕ್ಷ | 13.15 ಲಕ್ಷ | 39.84 ಲಕ್ಷ |
| ಗಣಿಗಾರಿಕೆ | 12.00 | 3.00 | 9.00 |
| ಉದ್ಯಮಗಳು | 2.60 | 0.65 | 1.95 |
| ವನ್ಯಧಾಮ ನಿರ್ಮಾಣ | 5.00 | 1.25 | 3.75 |
| ಇತರೆ | 1.5 | 0.40 | 1.10 |
| ಒಟ್ಟು | 74.14 ಲಕ್ಷ | 19.45 ಲಕ್ಷ | 55.65 ಲಕ್ಷ |

(**ಆಧಾರ:** ಪೀಪಲ್ಸ್ ರಿ ಪೋರ್ಟರ್ ಅಕ್ಟೋಬರ್–1–15–1995)3

ಹೀಗೆ ನಮ್ಮ ದೇಶದಲ್ಲಿ ಈ ಬಗೆಯ ಅಭಿವೃದ್ಧಿ ಯೋಜನೆಗಳು ನಿರ್ಮಾಣವಾಗಿವೆ. ಇಲ್ಲಿ ಅರಣ್ಯ ನಾಶವನ್ನೇ ಕಾಣುತ್ತೇವೆ. ಅರಣ್ಯ ನಿರ್ಮಿಸುವ ಯೋಜನೆಗಳು ತೀರಾ ವಿರಳವಾಗಿರುವುದನ್ನು ಕಾಣುತ್ತೇವೆ. ಇದರಿಂದ ಜೀವಸಂತತಿಯ ನಾಶಕ್ಕೆ ಕಾರಣವಾಗಿದೆ. ಕೃಷಿ ಭೂಮಿಯ ನಾಶದಿಂದ, ಅರಣ್ಯ ನಾಶದಿಂದ ಪರಿಸರದ ಮೇಲಾಗುವ ಪರಿಣಾಮವನ್ನು ನಾವು ಗಣನೆಗೆ ತೆಗೆದುಕೊಂಡಿಲ್ಲ.

ದಿನದಿಂದ ದಿನಕ್ಕೆ ಅಭಿವೃದ್ಧಿಯ ಹೆಸರಿನಲ್ಲಿ ಹಲವಾರು ಯೋಜನೆಗಳನ್ನು ಕಾಣುತ್ತೇವೆ. ಇದನ್ನು ತಡೆಗಟ್ಟಲು ಸಾಧ್ಯವಿಲ್ಲ. ಅದರಿಂದ ಭೂಮಿಯ ಮೇಲಾಗುವ ಬದಲಾವಣೆಗಳನ್ನು ಗಮನದಲ್ಲಿಟ್ಟುಕೊಂಡು ಯೋಜನೆಗಳನ್ನು ಮಾಡಬೇಕು. ಇಲ್ಲವಾದರೆ ನಮ್ಮ ಭೂಮಿಯ ಜೀವಜಾಲಗಳ ಬದುಕು ದುಸ್ತರವಾಗುತ್ತದೆ. ಅಷ್ಟು ಮಾತ್ರವಲ್ಲ ಭೂಮಿಯ ಮೇಲಿನ ದಬ್ಬಾಳಿಕೆ ಹೀಗೆ ಮುಂದುವರೆದರೆ ಮುಂದೊಂದು ದಿನ ಮಾನವನ ಬದುಕು ಸಹ ಕಷ್ಟವಾಗುತ್ತದೆ. ಏಕೆಂದರೆ ನಾವು ಬಳಸುವ ರಾಸಾಯನಿಕಗಳಿಂದ ಜೀವಿಗಳ ಜೀವಹಾನಿಯಾದರೆ ಅದು ನಮ್ಮ ಜೀವನದಮೇಲೂ ಸಹ ಪರಿಣಾಮವನ್ನು ಬೀರುತ್ತದೆ. ಗಣಿಗಾರಿಕೆಯಲ್ಲಿ ಬಳಸುವ ಬಾಂಬ್‌ಗಳ ಸಿಡಿತದಿಂದ ಉಂಟಾಗುವ ರಾಸಾಯನಿಕಗಳಿಂದ ನೀರು, ನೆಲ, ಜಲಚರಗಳು ಹೀಗೆ ಎಲ್ಲಾ ರೀತಿಯಿಂದ ಪರಿಸರದ ಮೇಲೆ ಹಾನಿಯನ್ನು ಕಾಣುತ್ತೇವೆ.

**ಪರಿಸರ ಮಾಲಿನ್ಯದಿಂದ ಪರಿಸರದ ಜೀವಿಗಳ ಮೇಲಾಗುವ ಪರಿಣಾಮ**

ಪರಿಸರ ಮಾಲಿನ್ಯದಿಂದ ನಮಗೆ ಮಾತ್ರವಲ್ಲ ಹಲವಾರು ಜೀವರಾಶಿಗಳ ಮೇಲೂ ಸಹ ಹಾನಿ ಉಂಟಾಗುತ್ತದೆ.

"ಜಗತ್ತಿನ ಜೀವ ರಾಶಿಗಳಲ್ಲೇ ಅತಿ ವಿಶಿಷ್ಟ ಎನ್ನಿಸಿಕೊಂಡ ಸಿಂಗಳಿಕಗಳಾಗಲಿ, ಮುಂಗಟೆ ಪಕ್ಷಿಗಳಾಗಲೀ ಬಣ್ಣದ ಮಂಡೂಕಗಳಾಗಲೀ ಇಲ್ಲಿ ಮಾತ್ರ ಜೀವಿಸಿವೆಯೆಂದೂ ಇಲ್ಲಿ ನಾಶವಾದರೆ ಪ್ರಪಂಚ ನಕಾಶೆಯಿಂದಲೇ ಅವು ಕಣ್ಮರೆ ಆಗುತ್ತವೆಯೆಂದೂ ಕೂಗಿ ಹೇಳಿದರೆ ಎಷ್ಟು ಜನರು ಕೇಳುತ್ತಾರೆ? ಕೇಳಿ ಸ್ಪಂದಿಸುತ್ತಾರೆ?"4ಇಂದು ನಾವು ಪರಿಸರದಲ್ಲಿನ ಜೀವಿಗಳ ಬಗ್ಗೆ ಚಿಂತಿಸುತ್ತಿಲ್ಲ, ಕಾರಣ ಅವುಗಳು ನಮ್ಮಂತೆ ಮಾತಾಡುವುದಿಲ್ಲ, ಪ್ರತಿಭಟಿಸುವುದಿಲ್ಲ. ಏಕೆಂದರೆ ನಮ್ಮ ಪಶ್ಚಿಮ ಘಟ್ಟಗಳಲ್ಲಿ ರಸ್ತೆ, ರೈಲು, ಗಣಿಗಾರಿಕೆಯ ಹೆಸರಿನಲ್ಲಿ ಏನೆಲ್ಲಾ ನಡೆಯುತ್ತಿವೆ ಎಂದರೆ, ಕಾಡಿನಲ್ಲಿನ ಪ್ರಾಣಿಗಳಿಗೆ ಹೇಗೆ ಹಾನಿ ಉಂಟಾಗುತ್ತಿದೆ ಎಂಬುದನ್ನು ಕಾಣುತ್ತೇವೆ. ಕಾಡಿನನಡುವೆ ಹಾಕಿದ ವಿದ್ಯುಥ್ ತಂತಿಗಳ ಮೇಲೆ ಕೋತಿಗಳು ಹಾರಿ ಪ್ರಾಣ ಕಳೆದುಕೊಳ್ಳುತ್ತಿವೆ. ವಾಹನಗಳಿಗೆ ಸಿಕ್ಕೆ ಎಷ್ಟೋ ಪ್ರಾಣಿಗಳು ಬಲಿಯಾಗುತ್ತವೆ. ಇದಕ್ಕೆ ಸಿಂಹಬಾಲದ ಕೋತಿಗಳೇ ಸಾಕ್ಷಿ. ಇವುಗಳಿಗೆ ಕಾಡಿನಲ್ಲಿ ಆಹಾರದ ಕೊರತೆ. ವಾಹನಗಳಿಗೆ ಸಿಕ್ಕಿ ನಾಶ ಹೀಗೆ ಹಲವಾರು ಕಾರಣದಿಂದ ಬಲಿಯಾಗುತ್ತಿವೆ.

**ಪರಿಸರದ ಸಸ್ಯಗಳ ಬಗ್ಗೆ ಕನ್ನಡ ಸಾಹಿತ್ಯದ ಮೂಲಕ ಅರಿವು.**

ನಮ್ಮ ಕನ್ನಡದ ಕವಿಗಳು ತಮ್ಮ ಸಾಹಿತ್ಯದಲ್ಲಿ ಪರಿಸರವನ್ನು ತೆಗೆದುಕೊಂಡು ಕವಿತೆಯನ್ನು ಬರೆದಿರುವುದನ್ನು ಕಾಣುತ್ತೇವೆ. ಹರಿಹರನ ರಗಳೆಯಲ್ಲಿ ಹಲವಾರು ಹೂವುಗಳ ಬಗ್ಗೆ, ಅವುಗಳ ಉಪಯೋಗದ ಬಗ್ಗೆ ಹೇಳುತ್ತಾ, ಪಂಪನ ಕಾವ್ಯಗಳಲ್ಲಿ ಗಿಡ ಮರ ಬಳ್ಳಿಗಳ ಬಗ್ಗೆ ವರ್ಣಿಸಿದ್ದಾರೆ.

'ಕಕುಭಾಶೋಕ ಕದಂಬ ಲುಂಗ ಲವಲೀ ಭೂಜಾರ್ಬುನಾನೋಕಹ ಪ್ರಕರಂ ಪುಷ್ಪಿತ ಹೇಮ ಪಂಕಜ...'5 ಈ ಗಿಡಗಳು ಖಾಂಡವವನದಲ್ಲಿ ಬೆಳೆದ ಗಿಡಗಳು ಎಂದು ಪಂಪ ಹೇಳುತ್ತಾನೆ. ಅಂದರೆ ಹಿಂದಿನ ಕಾಲದಲ್ಲಿ ಸಹ ಮೀಸಲು ಅರಣ್ಯಗಳು ಇದ್ದವು ಎಂದೂ, ಅವುಗಳನ್ನು ರಕ್ಷಿಸಲ್ಪಡುತ್ತಿದ್ದರು ಎಂದೂ, ಪಂಪ ತನ್ನ ಕೃತಿಗಳಲ್ಲಿ ವಿವರಿಸಿರುವುದನ್ನು ಕಾಣುತ್ತೇವೆ. ಅಲ್ಲದೆ ಖಾಂಡವವನ ದಹನದ ಸಮಯದಲ್ಲಿ ಎಲ್ಲಾ ಗಿಡ, ಮರ, ಪ್ರಾಣಿ ಪಕ್ಷಿಗಳು ನಾಶವಾಗಿರುವುದನ್ನು ಕಾಣುತ್ತೇವೆ. ಇಲ್ಲಿ ತಮ್ಮ ಮಾತನ್ನು ಉಳಿಸಿಕೊಳ್ಳಲು ಅದಿಕಾರಿಗಳು ಅರಣ್ಯವನ್ನು, ಅಲ್ಲಿನ ಜೀವಿಗಳನ್ನು ಬಲಿತೆಗೆದುಕೊಂಡರು ಎಂಬುದನ್ನು ಇಲ್ಲಿ ಕಾಣುತ್ತೇವೆ.

ಇಂದಿಗೂ ಸಹ ನಮ್ಮ ಅದಿಕಾರಿಗಳು ತಮ್ಮ ಕಾಲದಲ್ಲಿನ ಆಡಳಿತದ ಸಲುವಾಗಿ ಪರಿಸರಹಾನಿಯ ಬಗ್ಗೆ ಯೋಚಿಸದೇ ಅಭಿವೃದ್ಧಿ ಎಂಬ ಹೆಸರಿನಲ್ಲಿ ದಾಳಿಯನ್ನು ಮಾಡುತ್ತಲೇ ಬಂದಿರುವುದನ್ನು ಕಾಣುತ್ತೇವೆ. ಆದುದರಿಮದ ಇಲ್ಲಿ ಪರಿಸರ ಹಾನಿಯ ಅರಿವನ್ನು ಮೂಡಿಸುವುದು ಅನಿವಾರ್ಯವಾಗಿದೆ.

ಹರಿಹರನ ರಗಳೆಗಳಲ್ಲಿ ಜಾಜಿ, ಲಲ್ಲೆ, ಸಂಪಿಗೆ, ಮಲ್ಲಿಗೆ, ಕೇದಿಗೆ ಹೀಗೆ ಎಲ್ಲಾ ಹೂವುಗಳನ್ನೂ ಕವಿ ವರ್ಣಿಸುವುದನ್ನು ಕಾಣುತ್ತೇವೆ. ಅಂದರೆ ಕವಿ ತಮ್ಮ ಕಾವ್ಯದಲ್ಲಿ ಬರುವ ಏನೆಲ್ಲಾ ಹೂಗಳನ್ನು ವರ್ಣಿಸುತ್ತಾ ಅವುಗಳ ಮೇಲೆ ದಬ್ಬಾಳಿಕೆಯನ್ನು ಮಾಡಿಲ್ಲ. 'ಅಮ್ಮಾ ಸಂಪಿಗೆಯೇ ನಿನ್ನ ಸವಿಗಂಪಿನ ಪೂಗಳನ್ನು ನನ್ನ ಶಿವನ ಪೂಜೆಗೆ ನೀಡು' ಎಂದು ಕೇಳುವುದರೊಂದಿಗೆ ಪರಿಸರದ ಮರ,ಗಿಡಗಳ ಬಗ್ಗೆ  ಹರಿಹರನಿಗಿರುವ ಕಾಳಜಿಯನ್ನು ವ್ಯಕ್ತಪಡಿಸಿದ್ದಾನೆ.

ನಮ್ಮ ನಿಸಾರ್ ಅಹಮದ್ ಅವರ "ಜೋಗದ ಸಿರಿಬೆಳಕಿನಲ್ಲಿ" ಈ ಕವಿತೆಯಲ್ಲಿ ನಮ್ಮ ಪಶ್ಚಿಮ ಘಟ್ಟದ ವರ್ಣನೆಯನ್ನು ಕಾಣುತ್ತೇವೆ. ಕುವೆಂಪುರವರ 'ದೇವರು ರುಜುಮಾಡಿದನು' ಕೃತಿಯಲ್ಲಿ ಪ್ರಕೃತಿಯಲ್ಲಿನ ಹಕ್ಕಿಗಳ ಹಾರಾಟವನ್ನೇ ಕವಿ ತಮ್ಮ ಕವಿತೆಯ ವಸ್ತುವಾಗಿ ಬಳಸಿರುವುದನ್ನು ಕಾಣುತ್ತೇವೆ.

ನಮ್ಮ ದೇಶದಲ್ಲಿ ಹಣ್ಣುಗಳ ರಾಜ ಎಂದು ಕರೆಸಿಕೊಳ್ಳುವ ಹಣ್ಣು 'ಮಾವಿನಹಣ್ಣು' ಇದು ಇದನ್ನು ಮಂಗಳಕರವಾಗಿ ಇದರ ಎಲೆಗಳನ್ನು ಬಳಸುತ್ತಾರೆ. ನಮ್ಮ ದೇಶದಲ್ಲಿ ಇದು ಅತೀ ಮುಖ್ಯವಾದ ಬೆಳೆಯಾಗಿದೆ. ಇದನ್ನು ಬಟ್ಟೆಗಳ ಮೇಲಿನ ಕಲಾ ಕೃತಿಗೂ, ಆಭರಣಗಳ ಮೇಲಿನ ಕಲಾಕೃತಿಗೂ ಬಳಸುತ್ತಾರೆ.

'ಮಾವಿನ ಕಾಯಿನ ರೂಪ ಬಹುಕಾಲದಿಂದಲೂ ಕಲಾ ಪ್ರಪಂಚಕ್ಕೆ ಚೇತನದಾಯಿಯಾಗಿದೆ. ಕಾಯಿಯ ಆಕೃತಿಗಳನ್ನು ಕಲ್ಲಿನಲ್ಲಿ ಕೊರೆದು, ಪೀತಾಂಬರದಲ್ಲಿ ಕಲಾಬತ್ತಿನಿಂದ ನೇಯ್ದರು, ರಾಜಮಹಾರಾಜರ ಮುಡಿ ಮೊದಲಾದ ಆಭರಣಗಳಲ್ಲಿ ನವರತ್ನಖಚಿತವಾದ ಅನುಭರಣಗಳಾಗಿ ಅಡಗಿಸಿದರು' 6ಮಾವಿನ ಎಲೆ, ಕಾಯಿ ಎಲ್ಲದನ್ನೂ ಇಲ್ಲಿ ಬಳಕೆಮಾಡುತ್ತಿರುವುದನ್ನು ಕಾಣುತ್ತೇವೆ. ' ಎತ್ತಲ ಮಾಮರ ಎತ್ತಲ ಕೋಗಿಲೆ ಎತ್ತಲೆತ್ತಲಿಯ ಸಂಬಂದ' ಎಂದು ಹೇಳುವುದನ್ನು ಕೇಳುತ್ತೇನ. ಅಂದರೆ ಈ ಮರ ಜನರ ಮನ ಮನೆಗಳ ಮಾತಾಗಿದೆ. ಅಂದರೆ ಈ ಮರ ಅಂದಿನ ಕಾಲಕ್ಕೆ, ಈ ಸಸ್ಯ ತುಂಬಾ ಜನಜನಿತವಾಗಿದ್ದುದನ್ನು ಕಾಣುತ್ತೇವೆ .ಪರಿಸರದ ಜೀವಿಗಳಲ್ಲಿರುವ ಒಡನಾಟವನ್ನು ಅರಿತು, "ಮಾಮರವೆಲ್ಲೂ ಕೋಗಿಲೆ ಅಲ್ಲೇ ಏನಿಪ್ರೇಮ ಸಂಬಂಧ" ಎಂದು ಕನ್ನಡಸಾಹಿತ್ಯಕ್ಕು ಪರಿಸರದ ಜೀವಿಗಳಿರುವ ಸಂಬಂಧವನ್ನು  ಹೇಳುತ್ತದೆ. ಹೀಗೆ ಪರಿಸರದ ಜೀವಿಗಳಿಗೂ ಮಾನವನಿಗೂ ಇರುವ ಸಂಬಂಧವನ್ನು ಹೇಳುತ್ತದೆ.

### ಕೃಷಿ ಭೂಮಿ ಒತ್ತುವರಿಯಿಂದ ಪರಿಸರಕ್ಕಾಗುವ ಹಾನಿ

'ಹದಿನೈದು ವರ್ಷಗಳ ಹಿಂದೆ ನಡೆಸಿದ ಅಜಮಾಸು ಸಮೀಕ್ಷೆಯ ಪ್ರಕಾರ ಸಿಂಗಳಿಕಗಳ ಒಟ್ಟೂ ಸಂಖ್ಯೆ 2500 ಕಿಂಮ್ಮಿ ಇತ್ತು. ಇದನ್ನು 'ಅಳಿವಿನಂಚಿನ ಪ್ರಾಣಿ' ಎಂದು  ಇದನ್ನು ಅಂತರರಾಷ್ಟ್ರೀಯ ನಿಸರ್ಗ ಸಂರಕ್ಷಣ ಸಂಘ ಘೋಷಿಸಿ ರೆಡ್ ಲಿಸ್ಟಿನಲ್ಲಿ ಸೇರಿಸಿದೆ.' 7ಇದಕ್ಕೆ ಕಾರಣ   ಎಂದು ಇಂದು ಇವುಗಳ ಸಂತತಿಯಲ್ಲಿ ಗಣನೀಯವಾಗಿ ಇಳಿಮುಖವಾಗಿವೆ. ಕಾರಣ ಕಾಡನ್ನು ಕಡಿದು ಕೃಷಿ ಭೂಮಿಯನ್ನು ಮಾಡುತ್ತಾ ಚಹಾ, ಕಾಫಿ ತೋಟಗಳನ್ನು ಮಾಡುತ್ತಿರುವುದು ಸಹ ಒಂದು ಕಾರಣವಾಗಿದೆ. ಈ ಬಗೆಯ ಉದಾಹರಣೆಗಳನ್ನು ಪಶ್ಚಿಮ ಘಟ್ಟಗಳ ಉದ್ದಕ್ಕೂ ಕಾಣುತ್ತೇವೆ.

'ಪಶ್ಚಿಮ ಘಟ್ಟಗಳ ನಿಜವಾದ ಪತನ ಪ್ರಾರಂಭವಾಗಿದ್ದು ಸ್ವಾತಂತ್ರ ಬಂದ ನಂತರವೇ. ಒಂದು ಕಡೆ ಜನಸಂಖ್ಯೆ ಏರಿಕೆಯಿಂದಾಗಿ ಕೃಷಿ ಭೂಮಿಯ ವಿಸ್ತರಣೆ ಆಗತೊಡಗಿತು. ರೈತರು ಅರಣ್ಯ ಕಡಿದು ಅಕ್ರಮ ಸಾಗುವಳಿ ಆರಂಭಿಸಿದರು. ಇನ್ನೊಂದು ಕಡೆ ಅರಣ್ಯ ಹುಟ್ಟುವಳಿಗಳಾದ ಮೆಣಸು, ದಾಲಚಿನ್ನಿ, ಜೇನು, ಧೂಪ, ಕೋಕಮ್, ಉಪ್ಪಾಗೆ,ರಾಳ ಬಗಿನೆ, ಬಿದಿರುಗಳಿಗೆ ನಗರಗಳಲ್ಲಿ ಬೆಲೆ ಏರಿದ್ದರಿಂದ ಹಣದಾಸೆಗೆ ಕಾಡನ್ನು ದೋಚುವ ಸಂಖ್ಯೆ ಹೆಚ್ಚಾಯಿತು.'8.ಇತ್ತೀಚಿನ ದಿನಗಳಲ್ಲಿ ಕಾಡಿನ ಸಂಪತ್ತುಗಳಿಗೆ ಬೇಡಿಕೆ ಹೆಚ್ಚಾಗಿರುವುದರಿಂದ ಅಲ್ಲಿನ ವಸ್ತುಗಳನ್ನು ನಾಶ ಮಾಡಿಯಾದರೂ ಅದನ್ನು ಕೆಲಒಮ್ಮೆ ದೂಚುವುದನ್ನು ಕಾಣುತ್ತೇವೆ. ಭಾರತದಲ್ಲಿ ಜನಸಂಖ್ಯೆ ಹೆಚ್ಚಳ ಒಂದು ಕಡೆಯಾದರೆ, ಅದರಿಂದ ಅರಣ್ಯವನ್ನು ಒತ್ತುವರಿ ಮಾಡುತ್ತಾ ಕೃಷಿ ಭೂಮಿಯನ್ನು ಹೆಚ್ಚಿಸುತ್ತಿರುವವರನ್ನು ಕಾಣುತ್ತೇವೆ. ಅಲ್ಲದೆ ಕೆಲ ಒಮ್ಮೆ ಸರ್ಕಾರದವರೇ ಭೂಮಿಯ ಹಂಚಿಕೆಯಲ್ಲಿ ಅರಣ್ಯವನ್ನು ಬಳಸಿಕೊಂಡಿರುವುದು ಸಹ ಕಾಣುತ್ತೇವೆ. ಅಲ್ಲದೆ ರೈತರು ನಿಧಾನವಾಗಿ ಅರಣ್ಯವನ್ನು ಒತ್ತುವರಿ ಮಾಡುತ್ತಿರುವುದು ಬೇಗನೇ ಗಮನಕ್ಕೆ ಬಾರದೇ ಇರುವುದೂ ಸಹ ಕಾರಣ. ಹೀಗೆ ನಮ್ಮ ಪರಿಸರದ ಮೇಲೆ ದಿನದಿಂದ ದಿನಕ್ಕೆ ಒತ್ತಡಗಳು ಹೆಚ್ಚಾಗಿರುವುದನ್ನು ಕಾಣುತ್ತೇವೆ. ಅದರಿಂದ ಆಗುವ ಹಾನಿಯನ್ನು ನಾವು ಅರಿಯಲೇ ಬೇಕು ಇಲ್ಲವಾದರೆ ಈ ಬಗೆಯ ಪರಿಸರ ದಾಳಿಗೆ ತುತ್ತಾಗುತ್ತಲೇ ಇರಬೇಕಾಗುತ್ತದೆ.

ಕನ್ನಡ ಸಾಹಿತ್ಯಕ್ಕು ಪರಿಸರಕ್ಕೂ ಇರುವ ಸಂಬಂಧ ಇಂದು ನಿನ್ನೆಯದಲ್ಲ. ಆದಿ ಕವಿ ಪಂಪನಿಂದ ಹಿಡಿದು, ಇಂದಿನ ಕವಿಗಳ ವರೆಗೆ ಕನ್ನಡ ಸಾಹಿತ್ಯದಲ್ಲಿ ಪರಿಸರದ ಪ್ರಾಣಿ ಪಕ್ಷಿಗಳನ್ನು, ಗಿಡ ಮರಗಳನ್ನು ಬಳಸಿಕೊಂಡು ಕಾವ್ಯ ರಚಿಸಿರುವುದನ್ನು ಕಾಣುತ್ತೇವೆ. ಈ ಕವಿಗಳಿಗಿರುವ ಪರಿಸರದೊಡಗಿನ ಒಡನಾಟವೇ ಇದಕ್ಕೆ ಕಾರಣವಾಗಿರುತ್ತದೆ. ಇದನ್ನು ನಾವು ಅರಿಯದೇ ಹೋಗಿದ್ದೇವೆ. ಇಂದಿನ ಕನ್ನಡ ಸಾಹಿತ್ಯದಲ್ಲಿ ಪರಿಸರದ ಎಲ್ಲಾ ಜೀವಿಗಳ ಬಗ್ಗೆ ಅರಿವು, ಅವುಗಳಿಂದಾಗುವ ಉಪಯೋಗ, ಯಾವ ಪರಿಸರದಲ್ಲಿ ಇವುಗಳು ಬದುಕುತ್ತವೆ. ಈ ಎಲ್ಲಾ ಅರಿವನ್ನು ನಾವು ಮೂಡಿಸಿದರೆ ಮಾತ್ರ ಪರಿಸರದಲ್ಲಿನ ಎಲ್ಲಾ ಜೀವಿಗಳನ್ನು ಉಳಿಸಿಕೊಳ್ಳಲು ಸಾಧ್ಯ. ಅವುಗಳು ವಾಸಿಸುವ ಪರಿಸರವನ್ನು ಉಳಿಸಿಕೊಳ್ಳಲು ಸಹಾಯಕವಾಗುತ್ತಿದೆ. ದಿನದಿಂದ ದಿನಕ್ಕೆ ಅಭಿವೃದ್ಧಿಯ ಹೆಸರಿನಲ್ಲಿ ಕಾಡನ್ನು, ಗುಡ್ಡಗಳನ್ನು ಒತ್ತುವರಿಮಾಡುತ್ತಲೇ ಬಂದಿದ್ದೇವೆ. ಇದಕ್ಕೆ ಪ್ರತಿಫಲವನ್ನೂ ಸಹ ಕಾಣುತ್ತಾ ಬಂದಿದ್ದೇವೆ. ಇತ್ತಿಚಿನ ದಿನಗಳಲ್ಲಿ ಗುಡ್ಡಕುಸಿತ, ಪ್ರವಾಹಕ್ಕೆ ಪ್ರತಿ ವರ್ಷ ಗುಡ್ಡಕುಸಿಯುತ್ತಿರುವುದರಿಂದ ಇಂದು  ಯೋಚಿಸುವ ಮಟ್ಟಕ್ಕೆ ಬಂದಿದೆ. ಇನ್ನು ಮೇಲೂ ಸಹ ಮಾವು ಎಚ್ಚರಾಗದೇ ಹೋದರೆ ಮುಂದೆ ಇನ್ನೂ ಭಯಾನಕವಾದ ಕರಾಳ ದಿನಗಳನ್ನು ಕಾಣಬೇಕಾಗುತ್ತದೆ.

ಹಾಗಾಗಿ ನಾವು ಈ ಅರಿವನ್ನು ಮೂಡಿಸುವುದು ಅನಿವಾರ್ಯ, ಅವಶ್ಯವಾಗಿದೆ. ಕನ್ನಡ ಸಾಹಿತ್ಯವೂ ಸಹ ಇದರಲ್ಲಿ ಒಂದು ಮಾರ್ಗವಾಗಿದೆ.

**ಆಕರಗ್ರಂಥಗಳು**


1. ನಾಗೇಶ ಹೆಗಡೆ, ಈಶ್ವರ್ ಪ್ರಸಾದ್ – ಮನುಕುಲದ ರಕ್ಷಣೆಗೆ ಮಹತ್ವದ ದಿನಗಳು ಪುಟ–103
2. ನಾಗೇಶ ಹೆಗಡೆ ಅಭಿವೃದ್ಧಿಯ ಅಂದ ಯುಗ ಪುಟ–41
3. ಡಾ. ಬಿ, ಜಿ, ಎಲ್, ಸ್ವಾಮಿ. ಸಸ್ಯ ಪುರಾಣ ಪುಟ––
4. ಡಾ. ಬಿ.ಜಿ.ಎಲ್ ಸ್ವಾಮಿ. ಹಸಿರುಹೊನ್ನು ಪುಟ–296
5. ನಾಗೇಶ ಹೆಗಡೆ– ಅಪೂರ್ವ ಪಶ್ಚಿಮ ಘಟ್ಟ ಪುಟ–23 ಮುದ್ರಣ2017
6. ನಾಗೇಶ ಹೆಗಡೆ– ಅಪೂರ್ವ ಪಶ್ಚಿಮ ಘಟ್ಟ– ಪುಟ–11, ಮುದ್ರಣ 2017


**ಪರಾಮರ್ಶನ ಗ್ರಂಥಗಳು**


1. ಪೂರ್ಣಚಂದ್ರ ತೇಜಸ್ವಿ–ನಿಗೂಢ ಮನುಷ್ಯರು ಪುಟ–97. 2009
2. ಸಂ. ಡಾ. ಬಸವರಾಜ ಕಲ್ಗುಡಿ. ಸುವರ್ಣ ಸಾಹಿತ್ಯ ವಿಚಾರ. ಪುಟ– 498 ಮುದ್ರಣ 2006
3. ಸಂ. ಡಾ. ಬಸವರಾಜ ಕಲ್ಗುಡಿ. ಸುವರ್ಣ ಸಾಹಿತ್ಯ ವಿಚಾರ. ಪುಟ 587–588
4. ಮುದ್ರಣ 2006